ಶ್ರೀ ರಾಮಕೃಷ್ಣ ಹೆಗಡೆ (ವಾಣಿಜ್ಯ ಮಂತ್ರಿಯವರು).—

ಅ) ಏಪ್ರಿಲ್ ೧೯೮೪ ರಿಂದ ಜುಲೈ ೧೯೮೭ರವರೆವಿಗೆ ಲೋಕಾಯುಕ್ತವು ದಾಳಿ ಮಾಡಿದ ಪ್ರಕರಣಗಳ ಸಂಖ್ಯೆ. ೪೧

೧. ಅಧಿಕಾರಿಗಳು ೨೬

೨. ನೌಕರರು ೧೫

ವಶಪಡಿಸಿಕೊಳ್ಳಲಾದ ಸಂಪತ್ತಿನ ವಿವರಗಳು ಈ ಕೆಳಕಂಡಂತಿವೆ.

೧) ಚಿನ್ನದ ಒಡವೆಗಳು—ಸುಮಾರು ೩೪ ಕಿ. ಗ್ರಾಂ.

೨) ಬೆಳ್ಳಿಯ ಸಾಮಾನುಗಳು ಸುಮಾರು ೨೨ ಕಿ. ಗ್ರಾಂ.

೩) ನಗದು ಹಣ ರೂ. ೬,೨೩,೫೦೦–೦೦

೪) ನಗದು ಪತ್ರಗಳು ಮತ್ತು ರಾಷ್ಟ್ರೀಯ ಉಳಿತಾಯ ಮಂತ್ರಿತರೆ ಪತ್ರಗಳು ರೂ. ೬,೪೫,೨೦೦–೦೦

೫) ಇತರೆ ಬೆಲೆ ಬಾಳುವ ವಸ್ತುಗಳು ರೂ. ೪೨,೦೦೦–೦೦

ಆ) ೯ ಪ್ರಕರಣಗಳು.

ಪ್ರಾಥಮಿಕ ಆರೋಗ್ಯ ಘಟಕ ಆರೋಗ್ಯ ಕೇಂದ್ರಗಳಾಗಿ ಹಾಗೂ ಆರೋಗ್ಯ ಘಟಕಗಳನ್ನು ಆರೋಗ್ಯ ಉಪಕೇಂದ್ರಗಳಾಗಿ ಪರಿವರ್ತಿಸುವ ಬಗ್ಗೆ.

೧೯೨೨ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕಗಳನ್ನು '' ಪ್ರಾಥಮಿಕ ಆರೋಗ್ಯ ಕೇಂದ್ರ" ಗಳಾಗಿ ಹಾಗೂ ಆರೋಗ್ಯ ಘಟಕಗಳನ್ನು " ಆರೋಗ್ಯ ಉಪಕೇಂದ್ರಗಳಾಗಿ ಪರಿವರ್ತಿಸಲು ಸರ್ಕಾರ ದವರು ಕ್ರಮ ಕೈಗೊಂಡಿದ್ದಾರೆಯೇ ?

ಆ) ಹಾಗಿದ್ದಲ್ಲಿ ಈ ಪರಿವರ್ತನಾ ಕಾರ್ಯಗಳು ಯಾವ ಹಂತದಲ್ಲಿವೆ ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಪ್ರಾಥಮಿಕ ಆರೋಗ್ಯ ಘಟಕಗಳನ್ನು ಹಂತ ಹಂತವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ ಗಳನ್ನಾಗಿ ಪರಿವರ್ತಿಸುವ ಬಗ್ಗೆ ಕ್ರಮವನ್ನು ಕೈಗೊಳ್ಳಲಾಗುತ್ತಿದೆ.

ಆರೋಗ್ಯ ಘಟಕಗಳನ್ನು ಆರೋಗ್ಯ ಉಪಕೇಂದ್ರಗಳನ್ನಾಗಿ ಪರಿವರ್ತಿಸುವ ಯೋಜನೆ ಇರುವುದಿಲ್ಲ.

ಆ) ಭಾರತ ಸರ್ಕಾರವು ಕನಿಷ್ಠ ಅವಶ್ಯಕತೆ ಕಾರ್ಯಕ್ರಮದಡಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವ ಗುರಿಯನ್ನು ಪ್ರತಿ ವರ್ಷವು ನಿಗದಿಪಡಿಸುತ್ತದೆ. ರಾಜ್ಯದಲ್ಲಿ ಹಾಲಿ ಇರುವ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಹಂತ ಹಂತವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ ಗಳನ್ನಾಗಿ ಪರಿವರ್ತಿಸುವ ಮೂಲಕ ಈ ಗುರಿಯನ್ನು ಸಾಧಿಸಲಾಗುತ್ತಿದೆ.

ಜಿಲ್ಲಾ ಪರಿಷತ್ತು ಕಾಯಿದೆ ಜಾರಿಗೆ ಬಂದಂದಿನಿಂದ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನಾಗಿ ಪರಿವರ್ತಿಸುವ ಗುರಿಯನ್ನು ಜಿಲ್ಲಾ ಪರಿಷತ್ತುಗಳಿಗೆ ವಂರು ನಿಗದಿ ಮಾಡಿ ಅವರು ಅದನ್ನು ಅವಶ್ಯಕತೆಯನ್ನು ಗಮನಿಸಿ ಅನುಷ್ಠಾನಗೊಳಿಸುವಂತೆ ತಿಳಿಸಲಾಗಿದೆ.